ವಿವರಿಸಿದ್ದಾರೆ. Suitability ಏನೆಂಬುದನ್ನು ಹೀಗೆ ಹೇಳಿದ್ದಾರೆ.

"Where the house to be allotted is a part of a building in the occupation of the landlord...."

ಇದನ್ನಾದರೂ ಸ್ವಲ್ಪ ಅರ್ಥ ಮಾಡಿಕೊಳ್ಳಬಹುದು. ಮುಂದೆ,

"is an outhouse of a building in such occupation or is otherwise closely connected with a building in such occupation....."

ಎಂದರೆ ಪಕ್ಕದಲ್ಲಿರುವ ಒಂದು ಮನೆಯಾದರೂ ಒಂದು ವಿಕೆಟ್‌ಗೇಟ್ ಇದ್ದರೆ ಆಯಿತು, ಅದೂ ಸೇರುತ್ತದೆ.

"and the landlord, being a vegetarian desires to have only a vegetarian tenant a non-vegetarian person shall be deemed to be an unsuitable tenant."

ಎಂದಿದೆ. ಇದು ಎಲ್ಲಿಯವರೆಗೆ ಹೋಗುತ್ತದೆಯೋ ಎಂಬುದನ್ನು ಯೋಚಿಸಿದರೆ ಆಶ್ಚರ್ಯವಾಗುತ್ತದೆ. ಉದಾಹರಣೆಗೆ, ನಾನ್‌ವೆಜಿಟೇರಿಯ್ಸ ಒಬ್ಬನು ಕೋರ್ಟಿಗೆ ಹೋಗಿ ನಾಕ್‌ವೆಜಿಟೇರಿಯ್ಸ ಅಲ್ಲ, ವೆಜಿಟೇರಿಯ್ಸ ಎಂದು ಹೇಳಿದರೆ ಇದನ್ನು ಅಲ್ಲವೆಂದು ರುಜುವಾತು ಕೊಡುವುದು ಹೇಗೆ? ಸ್ವಲ್ಪ ದಿನ ನಾಕ್‌ವೆಜಿಟೇರಿಯ್ಸ ಆಗಿದ್ದು ಅಲ್ಲಿಂದೀಚೆಗೆ ನಾನು ಅದನ್ನು ಬಿಟ್ಟುಬಿಟ್ಟೆ, ಎಂದು ಹೇಳಬಹುದು. ಹೀಗೆ ತೊಂದರೆಗೊಳಗಾಗಬಹುದು. ಈ ಮಸೂದೆ ತರುವಾಗ ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿಲ್ಲ. ಶಿಫಾರಸು ಹೇಗೆ ಬಂತೋ ಹಾಗೆ ಅದರ ಮೇಲೆ ಈ ಮಸೂದೆಯನ್ನು ತಂದಿದ್ದಾರೆಂದು ಕಾಣುತ್ತದೆ. ಹೀಗೆ ಅನೇಕ ದೋಷಪದೋಷಗಳಿವೆ. ಆದ ಕಾರಣ ಇದು ಸೆಲೆಕ್ಟ್ ಕಮಿಟಿಗೆ ಹೋದರೆ ಅಲ್ಲಿ ಎಚ್ಚರಿಕೆಯಿಂದ ಪರಿಶೀಲನೆ ಮಾಡಿ, ಏನು ತಿದ್ದುಪಡಿ ಆವಶ್ಯಕ ಎಂಬುದನ್ನು ಆಲೋಚನೆ ಮಾಡಿ ತರುತ್ತಾರೆ. ಹೋದ ಅಧಿವೇಶನದಲ್ಲಿ ಒಬ್ಬ ಸದಸ್ಯರು ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದರೂ ಹಾಗೆ ಮಾಡಲಿಲ್ಲ. ಈಗಲೂ ಮುಂದಿನ ಅಧಿವೇಶನಕ್ಕೆ ಕಾಯಬೇಕಾಗಿಲ್ಲ. ಇನ್ನೂ ಹತ್ತು ದಿನಗಳು ಈ ಅಧಿವೇಶನ ನಡೆಯುತ್ತದೆ. ಹೀಗೆ ನಡೆಯುವಾಗಲೇ ಸೆಲೆಕ್ಟ್ ಕಮಿಟಿಯ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಬಹುದು. ಆದುದರಿಂದ ಮಾನ್ಯ ಸಚಿವರು ಈ ಸೂಚನೆಯನ್ನು ಒಪ್ಪುತ್ತಾರೆಂದು ನಂಬಿದ್ದೇನೆ. ಇದು ಸೆಲೆಕ್ಟ್ ಕಮಿಟಿಗೆ ಹೋದರೆ ಉತ್ತಮವಾದ ಕಾನೂನನ್ನು ಮಾಡಲು ಸಾಧ್ಯವಾಗುತ್ತದೆಂದು ನನಗೆ ತೋರುತ್ತದೆ.

Mr. SPEAKER.—The House will now rise for lunch and meet again at 3-30 of the Clock.

The House rose for Lunch at Forty-five Minutes past Two of the Clock and met again at Thirty Minutes past Three of the Clock.

[Mr. SPEAKER in the Chair.]

CONDOLENCE REFERENCES.

DEMISE OF DR. SYAMA PRASAD MOOKERJEE.

ಶ್ರೀ ಕೆ. ಹನುಮಂತಯ್ಯ (ಸಭಾನಾಯಕರು).—ಸ್ಯಾಮಿ, ತಮಗೆಲ್ಲರಿಗೂ ಗೊತ್ತಿರುವಂತೆ ಇಂಡಿಯಾ ದೇಶದ ಸುಪ್ರಸಿದ್ಧ ದೇಶಭಕ್ತರಾದ ಶ್ರೀ ಶ್ಯಾಮ್ ಪ್ರಸಾದ್ ಮುಖರ್ಜಿಯವರು ನಿಧನರಾಗಿರತಕ್ಕದ್ದು ನಮ್ಮೆಲ್ಲರಿಗೂ ಅತ್ಯಂತ ದಾರುಣವಾದ ಶೋಕವನ್ನುಂಟುಮಾಡಿದೆ. ಡಾ॥ ಶ್ಯಾಮ್ ಪ್ರಸಾದ್ ಮುಖರ್ಜಿಯವರು ಭಾರತ ಭೂಮಿಗೆ ಅನೇಕ ಕ್ಷೇತ್ರಗಳಲ್ಲಿ ಅಪೂರ್ವವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಮೊದಲು ಬಂಗಾಳಾ ಪ್ರಾಂತ್ಯದ ರಾಜಕೀಯದಲ್ಲಿ ಪ್ರಾಮುಖ್ಯತೆಯನ್ನು ಪಡೆದು ಅಲ್ಲಿ ಮಂತ್ರಿಗಳಾಗಿದ್ದರು; ಬಹಳ ಪ್ರಖ್ಯಾತಿಯನ್ನು ಪಡೆದಿರತಕ್ಕಂಥ ಕಲ್ಕತ್ತಾ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಆಗಿದ್ದರು; ಹೀಗೆಯೇ ಬಂಗಾಳಾದಲ್ಲಿ ನಾನಾ ಕ್ಷೇತ್ರಗಳಲ್ಲಿ ಮತ್ತು ನಾನಾ ಸಂಸ್ಥೆಗಳಲ್ಲಿದ್ದು ಅಪಾರವಾದ ಸೇವೆಯನ್ನು ಸಲ್ಲಿಸಿ ಬಂಗಾಳಾದ ಪ್ರಮುಖರಲ್ಲಿ ಅತ್ಯಂತ ಶ್ರೇಷ್ಠರಾದವರೆಂಬ ಕೀರ್ತಿಯನ್ನು ಪಡೆದರು. ಅನಂತರ, ಅಖಿಲ ಭಾರತ ಕ್ಷೇತ್ರಕ್ಕೂ ಅವರು ಬಂದು, ಇಂಡಿಯಾ ದೇಶದ ಪ್ರಮುಖ ವ್ಯಕ್ತಿಗಳಲ್ಲೊಬ್ಬರಾದರು. ರಾಜ್ಯಾಂಗ ರಚನಾ ಸಭೆಯಲ್ಲೂ (Constituent Assembly) ಕೂಡ ಅವರು ಸದಸ್ಯರಾಗಿದ್ದರು. ಆದಾಗಿ, ಇಂಡಿಯಾ ಸರ್ಕಾರದ ಮಂತ್ರಿಗಳಲ್ಲೂ ಒಬ್ಬರಾಗಿ ಅವರು ಕೆಲಸ ಮಾಡಿದರು. ಅಲ್ಲಿ ಅವರು ರಾಜೀನಾಮೆಯನ್ನು ಕಾರಣಾಂತರದಿಂದ ಕೊಡಬೇಕಾಗಿ ಬಂದ ಮೇಲೆ, ಪಾರ್ಲಿಮೆಂಟಿನ ವಿರೋಧಪಕ್ಷದ ಪ್ರಮುಖ ವ್ಯಕ್ತಿಗಳಾಗಿ ಕೆಲಸ ಮಾಡಿದರು. ನನಗೆ ಅವರು ವೈಯಕ್ತಿಕವಾಗಿ ಗುರುತಿದ್ದುದಲ್ಲದೆ, ನಾನು ಅವರ ಸ್ನೇಹವನ್ನು ಸಂಪಾದಿಸತಕ್ಕಂಥ ಸದವಕಾಶವೂ ನನಗೆ ದೊರಕಿತು. ಪಾರ್ಲಿಮೆಂಟಿನಲ್ಲಿ ನಾನಿದ್ದಾಗ ಕಾಂಗ್ರೆಸ್ ಪಾರ್ಟಿಯ ಸದಸ್ಯನಾಗಿ ಅವರ ಕೆಲಸಕಾರ್ಯಗಳನ್ನು ನೋಡತಕ್ಕಂಥ ಸದವಕಾಶ ನನಗೆ ದೊರಕಿತ್ತು. ಪಾರ್ಲಿಮೆಂಟಿನಲ್ಲಿ—ಹಿಂದಿದ್ದ ಪಾರ್ಲಿಮೆಂಟಿನಲ್ಲೂ ಅಷ್ಟೆ, ಈಗಿರತಕ್ಕ ಪಾರ್ಲಿಮೆಂಟಿನಲ್ಲಿಯೂ ಅಷ್ಟೆ—ಅವರಿಗಿಂತಲೂ ಪ್ರತಿಭಾವಂತರಾದ ಪಾರ್ಲಿಮೆಂಟೇರಿಯ್ಸ ಇಲ್ಲವೆಂದು ಹೇಳಿದರೂ ಕೂಡ ಅತಿಶಯೋಕ್ತಿಯಾಗಲಾರದು. ಅವರು ಭಾಷಣ ಮಾಡುವುದಕ್ಕೆ ಎದ್ದು ನಿಂತುಕೊಂಡರೆಂದರೆ—ಅವರು ಕಾಂಗ್ರೆಸ್ ಪಾರ್ಟಿಯವರೊಡನೆ ಸಹಕರಿಸುತ್ತಿದ್ದಾಗಲೂ ಅಷ್ಟೆ, ವಿರೋಧಪಕ್ಷದಲ್ಲಿದ್ದಾಗಲೂ ಅಷ್ಟೆ—ಅವರು ಮಾತನಾಡುವುದನ್ನು ಪಾರ್ಲಿಮೆಂಟಿನ ಪ್ರತಿಯೊಬ್ಬ ಸದಸ್ಯರೂ ಬಂದು ಕೇಳಬೇಕೆಂದಿರುತ್ತಿದ್ದರು. ಅವರ ಭಾಷಣ, ಅದರ ಪಾಂಡಿತ್ಯ, ಈಗಲೂ ಕೂಡ ಅವರ ಭಾಷಣವನ್ನು ಕೇಳಿದವರಿಗೆ ಚಿರಸ್ಮರಣೀಯವಾಗಿದೆ. ಎರಡು-ಮೂರು ತಿಂಗಳ ಹಿಂದೆ, ಅವರು ಬೆಂಗಳೂರಿಗೆ ಬಂದಿದ್ದಾಗ—ಹಿಂದಿನ ಸ್ನೇಹವನ್ನು ಸ್ಮರಿಸಿಕೊಂಡೋ ಏನೋ, (ಅಷ್ಟು ದೊಡ್ಡ ಮನಸ್ಸು ಅವರದು)—ಅವರು ನನ್ನನ್ನು ಬಂದು ನೋಡಿದರು; ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಬಹಳ ಸ್ನೇಹದಿಂದ ಮಾತನಾಡಿ, ಜೊತೆಗೆ ಹೃತ್ಪೂರ್ವಕವಾಗಿ ಆಶೀರ್ವಾದ ಮಾಡಿ ಹೋದರು. ಆ ದಿವಸ, ಇಷ್ಟು ಜಾಗ್ರತೆ ಅವರು ದೈವಾಧೀನರಾಗುತ್ತಾರೆಂಬುದು ಯಾರ ಊಹೆಗೂ ಕೂಡ ನಿಲುಕದ ವಿಷಯವಾಗಿತ್ತೆಂದರೆ ಆಶ್ಚರ್ಯವಿಲ್ಲ.

(ಶ್ರೀ ಕೆ. ಹನುಮಂತಯ್ಯ.)

ಡಾ॥ ಮುಖರ್ಜಿಯವರು ದೇಶಕ್ಕೆ ಇಷ್ಟು ಅಪಾರವಾದ ಸೇವೆಯನ್ನು ನಲ್ಲಿಸಿ ಸ್ವರ್ಗಸ್ಥರಾಗಿರತಕ್ಕದ್ದನ್ನು ಅಭಿನಂದಿಸಿ, ಅವರ ಕೀರ್ತಿಯನ್ನು ಚಿರಸ್ಮರಣೀಯವಾಗಿ ನೆನೆದುಕೊಳ್ಳಬೇಕು. ಸಾವು ಒಂದಲ್ಲ ಒಂದು ದಿನ ಯಾರಿಗಾದರೂ ಬಂದೇ ಬರುತ್ತದೆ, ಆದರೆ, ಹೇಗೆ ಸತ್ತರು ಎಂಬುದೇ ಜನಗಳ ಮನಸ್ಸಿನಲ್ಲೂ, ಚರಿತ್ರೆಯಲ್ಲೂ ಉಳಿಯತಕ್ಕಂಥಾದ್ದು. ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳಿರಬಹುದು; ರಾಜಕೀಯ ರಂಗದಲ್ಲಿ ಒಬ್ಬರು ಒಂದು ಮಾರ್ಗವನ್ನನುಸರಿಸಿದರೆ, ಇನ್ನೊಬ್ಬರಿಗೆ ಆ ಮಾರ್ಗ ಸರಿಯೆಂದು ತೋರದಿರಬಹುದು. ಆದ್ದರಿಂದ ಡಾ॥ ಮುಖರ್ಜಿಯವರು ಅನುಸರಿಸಿದ ದಾರಿ ಮತ್ತು ಮಾಡಿದ ತ್ಯಾಗ-ಇವುಗಳ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಪ್ರಧಾನ ಮಂತ್ರಿಗಳಾದ ಪಂಡಿತ್ ಜವಹರಲಾಲ್ ನೆಹರೂರವರಿಗೂ ಕೂಡ ಅವರ ವಿಷಯವಾಗಿ ಎಷ್ಟು ಪ್ರೀತಿ ಮತ್ತು ಗೌರವವಿದೆಯೆಂಬುದನ್ನು ಅವರ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಈ ದಿವಸ ಅವರ ಸಾವಿನ ವಿಷಯದಲ್ಲಿ ಚರ್ಚೆ ನಡೆಯುತ್ತಿದ್ದರೂ ಕೂಡ ಅವರ ವ್ಯಕ್ತಿತ್ವಕ್ಕೆ, ಅವರ ಸೇವೆಗೆ ಹೃತ್ಪೂರ್ವಕವಾದ ಕಾಣಿಕೆಯನ್ನು ಪ್ರತಿಯೊಬ್ಬರೂ ಕೂಡ ಸಲ್ಲಿಸುತ್ತಿದ್ದಾರೆ. ಆ ದೃಷ್ಟಿಯಿಂದ ನಾನು ಈ ನಭೆಯ ಪರವಾಗಿ ಡಾ॥ ಶ್ಯಾಮ್ ಪ್ರಸಾದ್ ಮುಖರ್ಜಿಯವರ ಸೇವೆಯನ್ನು ಸ್ಮರಿಸಿ ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ. ಈ ನಭೆಯ ಸಂತಾಪವನ್ನು ಮತ್ತು ಕಾಣಿಕೆಯನ್ನು ಅವರ ಬಂಧುವರ್ಗದವರಿಗೆ ತಾವು ದಯವಿಟ್ಟು ತಿಳಿಸಬೇಕೆಂದು ಹೇಳಿ ನಾನು ಕೇಳಿಕೊಳ್ಳುತ್ತೇನೆ.

Sri J. MOHAMED IMAM (Jagalur).—I fully associate myself with the sentiments expressed by the Leader of the House. A great Indian and a great patriot passed away from our midst very recently under unfortunate circumstances, and his passing away is a great loss, a great blow to the nation. I have had the privilege of working with him as his colleague in the Governing Council of the Indian Institute of Science. There, I gathered the impression that he was a fearless worker, and that he always fought for justice and truth. The prosperity of the country and the upholding of justice were his first concern and his primary duty. I need not go into the details. All the aspects have been mentioned by the Leader of the House. His passing away is a great loss from one point of view. He was the Leader of the Opposition in the Parliament and he was a great check on any possible mistake that might have been committed. His absence from the Parliament will be felt immensely by all. So, Sir, I pay my tribute on my behalf and on behalf of my party and on behalf of the House. The same may be conveyed to the members of the bereaved family. I pray that his soul may rest in peace.

Sri MULKA GOVINDA REDDY (Chitaldrug).—While I am only associating myself with the feelings expressed at the untimely and sudden death of Sri Syam Prasad Mookherjee, I must sound a note of warning. In the olden days, when a detenu died in a British prison, the people of India ....

Sri K. HANUMANTHAIYA (Chief Minister).—Sir, this is an occasion when no controversial statements need be made. Otherwise, as representing Government—since it is the Government of India that is involved—I may be put to the necessity of replying to any statement which is very controversial.

Sri MULKA GOVINDA REDDY.—I am not making any controversial statement. I am only making a statement of fact. What is really sorrowful is that a person of Dr. Syam Prasad Mookherjee's stature and calibre should die in a prison and under detention without trial when democratic Governments are ruling in India and Kashmir.

Sri K. HANUMANTHAIYA.—Sir, this in substance is a highly controversial subject.

Sri MULKA GOVINDA REDDY.—I am not going into the merits of the case. I am not making any allegations against the mysterious death of Dr. Syam Prasad Mookherjee.

(*Interruption*).

I am only stating facts. What I am sorrowful for is that a man of that stature should die in a prison and under detention. I fully associate myself with the feelings expressed by the Leader of the House as well as the Leader of the Opposition. The people of India should be warned to be alert against such a thing being repeated elsewhere.

Mr. SPEAKER.—Late lamented Syam Prasad Mookherjee was a noble and courageous son of India. He was an eminent educationist. He was the Vice-Chancellor of the Calcutta University for some years. He was also, as pointed out by the Leader of the House, the Finance Minister of Bengal for some time. He was a member of the Bengal Assembly for several years. When he became the Minister for Industries and Supply in the Central Government, he made a mark of his life. We Indians are grateful to him for his distinguished service to the country and the people. He was a great fighter and great orator. He was the President of several institutions which were rendering very great service to humanity and to the people of the country. I feel it is my duty to associate myself with the sentiments expressed by the Leader of the House and the Leader of the Opposition and also Sri Mulka Govinda Reddy. As a mark of respect to the departed soul, I request the House to stand for two minutes.

(The House stood up in silence for two minutes).

Mr. SPEAKER.—We have ten minutes more. The same Bill may be discussed. Of course, it is understood that it will continue tomorrow also. One or two Members may make use of this time to speak on the Bill.

(No Hon'ble Member rose).

Mr. SPEAKER.—I now call upon Sri Rachiah and Sri Madappa to move their adjournment motions.

MOTION FOR ADJOURNMENT.

The loss and distress caused on account of heavy floods in Cauvery and Kapila.

Sri B. RACHIAH (Yelandur—Scheduled Castes).—Sir, I beg to move the following adjournment motion which runs as follows :

> "This House do stand adjourned to discuss a definite matter of urgent public importance and of recent occurrence, namely, the damages, loss and distress caused to the people on account of heavy flood of rivers Cauvery and Kapini from 6th to 8th instant."

ಸ್ವಾಮಿ, ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಚಾಮರಾಜನಗರ, ಟಿ.ನರಸೀಪುರ ಮತ್ತು ಗುಂಡ್ಲು ಪೇಟೆ ತಾಲ್ಲೂಕುಗಳಲ್ಲಿ ಹೆಚ್ಚು ಮಳೆಯೆ ಲ್ಲದೆ ಅದೊಂದು ಕ್ಷಾಮಪೀಡಿತ ಪ್ರದೇಶವಾಗಿ ನಮಗೆ ಕಂಡುಬಂದಿದ್ದರೂ ಕೂಡ ಈ ವರ್ಷ ತುಂಬ ಮಳೆ ಬಂತು. ಇದರಿಂದ ಒಂದುಕಡೆ ಸಂತೋಷವಿದ್ದರೂ ಕೂಡ ಹೆಚ್ಚಿನ ಪ್ರವಾಹದಿಂದ ಟಿ.ನರಸೀಪುರದ ತಾಲ್ಲೂಕಿನ ಕೆಲವು ಊರುಗಳಲ್ಲಿ ಮನೆಮಠಗಳು, ದನಕರುಗಳು, ದವಸ ಧಾನ್ಯಗಳು, ಹುಲ್ಲು ಪೆಂಡೆಗಳು ಆದಿಯಾಗಿ ಸಾವಿರಾರು ರೂಪಾಯಿ ಬೆಲೆ ಬಾಳುವ ವಸ್ತುಗಳು ನಷ್ಟವಾಗಿವೆ. ಇದು ಸರ್ಕಾರದವರು ತಪ್ಪೊಪ್ಪೇ ಸಾರ್ವಜನಿಕರ ತಪ್ಪೊಪ್ಪೇ ಎಂದು ಯಾರನ್ನೂ ನಿಂದಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇದೊಂದು 'Act of God' ಎಂದು ಹೇಳಬಹುದು. ಇದನ್ನು ಯಾರೂ ಕಂಡವರಿಲ್ಲ. ಆದರೂ ಕೂಡ ಆ ಪ್ರದೇಶದಲ್ಲಿ ದುರಂತಕ್ಕೊಳಗಾದ ಜನರಿಗೆ ಸರ್ಕಾರ ಎಷ್ಟುಮಟ್ಟಿಗೆ ಸಹಾಯವನ್ನು ನೀಡಿದೆ ಎಂಬ ವಿಷಯವನ್ನು ಚರ್ಚಿಸುವುದಕ್ಕಾಗಿ ನಾನು ಈ ನಿಲುವಳಿ ಸೂಚನೆಯನ್ನು ಸಭೆಯಮುಂದೆ ತರಬೇಕಾಗಿ ಬಂತು. ಸಂಸ್ಥಾನದ ಮುಖ್ಯ ಮಂತ್ರಿಗಳು, ಉಳಿದ ಮಂತ್ರಿಗಳು, ಎಂದರೆ ಆರೋಗ್ಯ ಸಚಿವರೂ ಮತ್ತು ವಿದ್ಯಾ ಸಚಿವರೂ 8ನೆಯ ತಾರೀಖು ಟಿ.ನರಸೀಪುರ ತಾಲ್ಲೂಕಿಗೆ ಬಂದು ಜನರಿಗೆ ಸಾಕಷ್ಟು ಸಹಾಯವನ್ನು ನೀಡುತ್ತೇವೆಂದು ಭರವಸೆಯನ್ನೇನೋ ಕೊಟ್ಟುಬಂದರು. ಆದರೆ ಅಲ್ಲಿ ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಇನ್ನೂ ತರಿಸಿಕೊಳ್ಳದೇ ಇರುವುದು ಶೋಚನೀಯವಾದ ವಿಚಾರ. ಎಷ್ಟು ನಷ್ಟವಾಗಿದೆ, ಇದಕ್ಕೆ ಎಷ್ಟುಮಟ್ಟಿನ ಪರಿಹಾರ ಕೊಡಬೇಕು ಎಂಬ ವಿಷಯವನ್ನು ತಿಳಿಯಲು ಅಂಕಿ ಅಂಶಗಳನ್ನು ಪಡೆಯಲು ಕೂಡಲೇ ಕಾರ್ಯಕ್ರಮ ಕೈಕೊಂಡಿಲ್ಲ. ಕೂಡಲೇ ಇದನ್ನು ಕೈಕೊಳ್ಳಲು ಸರ್ಕಾರ ಪ್ರಯತ್ನ ಪಡಬೇಕೆಂದು ಈ ಮೂಲಕ ತಿಳಿಯಲಿಚ್ಛಿಸುತ್ತೇನೆ.

ತಲಕಾಡು ಆದಿಕರ್ನಾಟಕ ಕಾಲೊನಿ, ಮಾಲಂಗಿ, ಕೆಂಡನಕೊಪ್ಪಲು, ಕಲಿಯೂರು, ನಿಲಸೋಗೆ, ದೊಡ್ಡಾಪುರ, ಕುಕ್ಕೂರು ಇನ್ನೂ ಕೆಲವು ಗ್ರಾಮಗಳಲ್ಲಿ ಮಣ್ಣಿನ ಗೋಡೆಗಳಿಂದ ಕಟ್ಟಿದ್ದ ಮನೆಗಳು ಕುಸಿದುಬಿದ್ದು ಅವರೆಲ್ಲರೂ ಹೊರಗೆ ಹೋಗಿದ್ದಾರೆ. ಇವರಿಗೆ ಸರ್ಕಾರದವರು ಮುನ್ನೂರು ರೂಪಾಯಿಗಳಂತೆ ಧನಸಹಾಯ ನೀಡಿ ಬೇರೆ ಎತ್ತರವಾದ ಸ್ಥಳಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ಕೊಡಬೇಕು; ಮತ್ತು ಅರಣ್ಯದಿಂದ ಮನೆ ಕಟ್ಟಿಕೊಳ್ಳಲು ಬೇಕಾದ ಮರ ಮುಟ್ಟುಗಳನ್ನು ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಅಲ್ಲಿ ಹೆಚ್ಚು ದವಸಧಾನ್ಯಗಳಿಲ್ಲದಿದ್ದರೂ ಇದ್ದ ಅಲ್ಪ ಸ್ವಲ್ಪ ಧಾನ್ಯವೂ ನೀರಿನಲ್ಲಿ ಕೊಚ್ಚಿಕೊಂಡು ಹೋಗಿರುವುದರಿಂದ ಅದನ್ನು ಸರ್ಕಾರ